**ಎಂ ವಿ ಸಿ ನಂ. 801/24**
**ಪಿ ಡಬ್ಲ್ಯೂ: 1**

**ದಿ: 12-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ:**

ಏನು ಇಲ್ಲ

**ಪಾಟೀ ಸವಾಲು:**

(1 ಮತ್ತು 4 ನೇ ಎದುರುದಾರರು ಏಕತರ್ಫಿ ಆಗಿದ್ದು ಪಾಟೀ ಸವಾಲು ಇಲ್ಲ ಎಯಿ ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀಮತಿ ಸಿ ಕೆ ವಕೀಲರಿಂದ:**

ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ನಾನು ಹೊಲ ಮನೆ ಕೆಲಸ ಮಾಡುತ್ತೇನೆ. ಮೃತ ಬಸಮ್ಮ ನನ್ನ ಹೆಂಡತಿ. ನಾನು ಬಸಮ್ಮನ ಗಂಡ ಹಾಗೂ ಉಳಿದ ಅರ್ಜಿದಾರರು ಮಕ್ಕಳು ಎಂದು ತೋರಿಸಲು ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ. ಅಪಘಾತದ ವಿಷಯ 15 ನಿಮಿಷಗಳ ನನಗೆ ಗೊತ್ತಾಗಿರುತ್ತದೆ. ಅಪಘಾತದಲ್ಲಿ ಒಂದು ಲಾರಿ, ಟಾಟಾ ಯೇಸ್ ಹಾಗೂ ಮೋಟರ ಸೈಕಲ ಇರುತ್ತವೆ ಅಂದರೆ ನಿಜ. 3 ವಾಹನಗಳ ಮೇಲೆ ಪೋಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನಾನು ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದು ದೂರು ನೀಡಿದ್ದೇನೆ ಎನ್ನುತ್ತಾರೆ. ನಾನು ಸ್ವತಃ ದೂರು ಕೊಟ್ಟಿಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಹೆಂಡತಿ ಬಸಮ್ಮ ಟಾಟಾ ಯೇಸ ವಾಹನದಲ್ಲಿ ಪ್ರಯಾಣಿಕಳಾಗಿ ಪ್ರಯಾಣಿಸುತ್ತಿದ್ದಳು ಅಂದರೆ ನಿಜ. ಟಾಟ ಯೇಸ್ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಹಾಗೂ ದೂರುದಾರ ಮತ್ತು ಗಾಯಾಳುಗಳು ಸೇರಿಕೊಂಡು 1 ನೇ ಎದುರುದಾರನ ವಾಹನದ ಚಾಲಕನ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಅಪಘಾತಕ್ಕೆ ಲಾರಿ ಚಾಲಕನ ನಿರ್ಲಕ್ಷತನ ಇಲ್ಲ ಅಂದರೆ ಸರಿಯಲ್ಲ. ಅಪಘಾತವು ಟಾಟಾ ಯೇಸ್ ವಾಹನದ ಚಾಲಕನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ಟಾಟಾ ಯೇಸ್ ವಾಹನ ಚಾಲಕನ ನಿರ್ಲಕ್ಷತನದಿಂದ ಅಪಘಾತ ಆಗಿಲ್ಲ ಎಂದರೆ ನಮಗೆ ಪರಿಹಾರ ಸಿಗುತ್ತದೆ ಎಂದು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಟಾಟಾ ಯೇಸ್ ವಾಹನದಲ್ಲಿ 15 ಜನ ಪ್ರಯಾಣಿಸುತ್ತಿದ್ದರು. 1 ನೇ ಎದುರುದಾರ ವಾಹನದ ಚಾಲಕನಿಗೆ ಚಾಲನಾ ಪರವಾನಿಗೆ ಇದ್ದು ವಾಹನ ವಿಮಾ ಸೌಲಭ್ಯ ಹೊಂದಿರುವುದರಿಂದ ಪರಿಹಾರ ಪಡೆದುಕೊಳ್ಳಲು ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಯಾವುದೆ ಅಪಘಾತ ಆಗಿಲ್ಲ ಅಂದರೆ ಸರಿಯಲ್ಲ. ಅಪಘಾತ ಹಾಗೂ 1 ನೇ ಎದುರುದಾರನಿಗೆ ಯಾವುದೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಟಾಟಾ ಯೇಸ್ ಚಾಲಕ ಚಾಲನಾ ಪರವಾನಿಗೆ ಹೋಂದಿರಲಿಲ್ಲ ಹಾಗೂ ವಾಹನವನ್ನು

ವೇಗವಾಗಿ ಚಲಾಯಿಸಿದ್ದರಿಂದ ಆತನ ನಿರ್ಲಕ್ಷತನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಮೋಟರ ಸೈಕಲ ಸವಾರನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಹಾಗೂ ಸದರಿ ವಾಹನ ವಿಮಾ ಸೌಲಭ್ಯ ಹೊಂದಿರಲಿಲ್ಲ ಆದ್ದರಿದ ವಾಹನ ಸವಾರ ಹಾಗೂ ಮಾಲೀಕನ ವಿರುದ್ಧ ಪೋಲೀಸರು ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ಮೋಟರ ಸೈಕಲ ವಾಹನ ಸವಾರ ಹಾಗೂ ಅದರ ಮಾಲೀಕರನ್ನು ಪ್ರಕರಣದಲ್ಲಿ ಸೇರಿಸದೆ ಇರುವುದರಿಂದ ನಮ್ಮ ಅರ್ಜಿ ವಿಚಾರಣೆಗೆ ಅರ್ಹವಲ್ಲ ಅಂದರೆ ಸರಿಯಲ್ಲ.

ಅಪಘಾತವಾದ ಸಮಯದಲ್ಲಿ ನನ್ನ ಹೆಂಡತಿಗೆ 28 ವರ್ಷ ವಯಸ್ಸಾಗಿದ್ದು ಟೇಲರಿಂಗ್ ಕೆಲಸದಿಂದ ತಿಂಗಳಿಗೆ 25 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಹೆಂಡತಿಯ ವಯಸ್ಸು ಹಾಗೂ ಆದಾಯದ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ನಾನು ಸಂಸಾರವನ್ನು ನೋಡಿಕೊಂಡು ಹೋಗುತ್ತಿದ್ದರು ಕೂಡಾ ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಯಾವುದೆ ಕೆಲಸ ಮಾಡುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಕೆಲಸ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ **3** ನೇ ಎದುರುದಾರರ ಪರಃ</u>

(3 ನೇ ಎದುರುದಾರ ಹಾಗೂ ಅವರ ಪರ ವಕೀಲರು ಹಾಜರ ಇರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**